# ಹಲೋಂಗ್ ಬೇ

## ಸುಂದರ ದ್ವೀಪಗಳ ಗುಚ್ಛ



**ಪುಟ್ಟ ಪುಟ್ಟ ದ್ವೀಪಗಳನ್ನು ತುಂಬಿಕೊಂಡಿರುವ ಹಲೋಂಗ್ ಬೇ, ಅಪೂರ್ವ ಪ್ರಕೃತಿಗೆ ಹೆಸರುವಾಸಿ. ತಿಳಿನೀರ ಸಾಗರ, ಬಿಳಿಮರಳ ತೀರ, ಸಾಲು ಸಾಲು ಹಸುರು ದ್ವೀಪಗಳು ಈ ಕೊಲ್ಲಿಯ ಚೆಲುವನ್ನು ಉದ್ದೀಪಿಸಿವೆ.**

**■ ಗೀತಾ ಕುಂದಾಪುರ**

ತಿಳಿ ನೀಲಿ, ಹಸುರು ಬಣ್ಣದ ಸ್ಫಟಿಕದಂಥ ನೀರು. ಸಮುದ್ರದ ಮಧ್ಯೆ ಎದ್ದು ನಿಂತ ಸುಣ್ಣದ ಕಲ್ಲಿನ ಬೆಟ್ಟಗಳು. ಆ ಬೆಟ್ಟಗಳಿಂದ ಆವೃತವಾದ ದ್ವೀಪಗಳೊಳಗೆ ಅಡಗಿ ಕುಳಿತ ನಿಗೂಢ ಗುಹೆಗಳು, ಸರೋವರದಲ್ಲಿ ಕಾಣುವ ಈ ನಡುಗಡ್ಡೆಗಳ ಬಿಂಬಗಳು... ಹಲೋಂಗ್ ಬೇ ಅನ್ನು ವಿಶ್ವದ ಅತ್ಯಂತ ಸುಂದರ ತಾಣಗಳಲ್ಲೊಂದಾಗಿಸಿದ ಸಂಗತಿಗಳಿವು.

ವಿಯೆಟ್ನಾಂ ರಾಜಧಾನಿ ಹನಾಯ್‌ನಿಂದ ಸುಮಾರು 165 ಕಿ.ಮೀ. ದೂರದಲ್ಲಿ, ಈಶಾನ್ಯ ದಿಕ್ಕಿನಲ್ಲಿ ದಕ್ಷಿಣ ಚೀನಾ ಸಮುದ್ರದಲ್ಲಿದೆ ಟೊಂಕಿನ್ ಕೊಲ್ಲಿ. ಈ ಟೊಂಕಿನ್ ಕೊಲ್ಲಿಯ ಪ್ರಮುಖ ಆಕರ್ಷಣೆಯೇ, ಸುಮಾರು 1600 ದ್ವೀಪಗಳ ಗುಚ್ಛ ಎಂದೇ ಖ್ಯಾತಿಯಾಗಿರುವ 'ಹಲೋಂಗ್ ಬೇ'.

ಈ ಹಲೋಂಗ್ ಬೇ ದ್ವೀಪಗಳ ಹುಟ್ಟಿಗೆ ಮಿಲಿಯಗಟ್ಟಲೆ ವರ್ಷಗಳ ಇತಿಹಾಸವಿದೆ. ಇದರ ವ್ಯಾಪ್ತಿ ಸುಮಾರು 1500 ಚದರ ಕಿ.ಮೀ. ಉದ್ದವಿದ್ದು, ಇಲ್ಲಿನ ಅಪರೂಪದ ಪ್ರಕೃತಿ ಸೌಂದರ್ಯ, ವಿಶ್ವವನ್ನು ತನ್ನೆಡೆಗೆ ತಿರುಗುವಂತೆ ಮಾಡಿದೆ. ಈ ಅನಂತ ಚೆಲುವಿನ ಕಾರಣಕ್ಕೆ, 1994ರಲ್ಲಿ ಹಲೋಂಗ್ ಬೇ ಅನ್ನು 'ಯುನಿಸ್ಕೊ ವರ್ಲ್ಡ್ ಹೆರಿಟೇಜ್ ಸೈಟ್' ಆಗಿ ಘೋಷಣೆ ಮಾಡಲಾಗಿದೆ. 2011ರಲ್ಲಿ ಈ ಸ್ಥಳವನ್ನು 'ವಿಶ್ವದ ಏಳು ನೈಸರ್ಗಿಕ ಅದ್ಭುತ'ಗಳಲ್ಲೊಂದು ಎಂದೂ ಹಾಡಿಹೊಗಳಲಾಗಿದೆ.

ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುವ ಉದ್ದೇಶ ಇಲ್ಲಿನ ಪ್ರಕೃತಿ ಸೌಂದರ್ಯವನ್ನು ಕಸಿದುಕೊಳ್ಳದಿರಲಿ ಎಂದು ವಿಯೆಟ್ನಾಂ ಸರ್ಕಾರ, 2009ರಲ್ಲಿ 'ವಿಶೇಷ ರಾಷ್ಟ್ರೀಯ ಲ್ಯಾಂಡ್‌ಸ್ಕೇಪ್ ಸೈಟ್' ಎಂದು ಘೋಷಣೆ ಮಾಡಿದೆ. ಇಲ್ಲಿ ಯಾವುದೇ ಕಟ್ಟಡ ಕಾಮಗಾರಿ ಅಥವಾ ಇನ್ನಾವುದೇ ಕಾರ್ಯ ನಡೆಸಲು ಸರ್ಕಾರದಿಂದ ವಿಶೇಷ ಅನುಮತಿ ಬೇಕು.

ಇಲ್ಲಿನ ಕೆಲವು ದ್ವೀಪಗಳು ಇತ್ತೀಚಿನ ಅನ್ವೇಷಣೆ. ಇನ್ನೂ ಕೆಲವು, ಉಬ್ಬರ ಬಂದಾಗ ಮುಳುಗಿವೆ. ಹಾಗಾಗಿ ದ್ವೀಪಗಳ ಸಂಖ್ಯೆಯ ಬಗ್ಗೆ ನಿಖರತೆ ಇಲ್ಲ. ಈ ದ್ವೀಪಗಳಲ್ಲಿ ಜನರು ವಾಸವಾಗಿಲ್ಲ. ಹೆಚ್ಚಿನ ದ್ವೀಪಗಳಲ್ಲಿ ಸುಣ್ಣದ ಕಲ್ಲಿನ ದಿಬ್ಬಗಳು ಮಾತ್ರ ಕಾಣಸಿಗುತ್ತವೆ. ಇಲ್ಲಿನ ಸುಂದರವಾದ ಕೆಲವು ದ್ವೀಪಗಳನ್ನೇ ಪ್ರವಾಸೋದ್ಯಮಕ್ಕೆ ಸಜ್ಜುಗೊಳಿಸಲಾಗಿದೆ. ಪ್ರವಾಸಿಗರನ್ನು ಸೆಳೆಯಲೆಂದೇ ಅನುಕೂಲಗಳನ್ನು ಕಲ್ಪಿಸಲಾಗಿದೆ. ಹಲೋಂಗ್ ಬೇ ಎಂದರೆ, 'ಡ್ರ್ಯಾಗನ್ ನೆಲ' ಎಂದು ಅರ್ಥೈಸಲಾಗುತ್ತದೆ. ಚೀನಾದಂತೆ ವಿಯೆಟ್ನಾಂನಲ್ಲೂ ಡ್ರ್ಯಾಗನ್‌ಗೆ ವಿಶೇಷ ಸ್ಥಾನಮಾನ.

ಸಾವಿರಾರು ವರ್ಷಗಳ ಹಿಂದೆಯೇ ಇಲ್ಲಿ ಜನವಸತಿ ಇದ್ದ ಕುರುಹು ದೊರೆತಿದೆ. ಆದಾಗ್ಯೂ 19ನೇ ಶತಮಾನದ ಅಂತ್ಯದಲ್ಲಿ ಒಂದೊಂದಾಗಿ ದ್ವೀಪಗಳು ಬೆಳಕಿಗೆ ಬಂದವು. ಇಲ್ಲಿ ತೇಲಾಡುವ ಮನೆಗಳನ್ನು ಹೊಂದಿದ್ದ ನಾಲ್ಕು ಹಳ್ಳಿಗಳಿದ್ದು, ಜನರು ವಾಸವಿದ್ದರು ಎನ್ನಲಾಗಿದೆ. ಆದರೆ ಸರ್ಕಾರ ಅವರ ಮನವೊಲಿಸಿ ಸ್ಥಳಾಂತರಿಸಿ ಸದ್ಯ ಆ ಜಾಗವನ್ನು ಮೀನುಗಾರಿಕೆಗೆ ಉಪಯೋಗಿಸಲಾಗುತ್ತಿದೆ.

ಇಲ್ಲಿನ ದ್ವೀಪಗಳ ಹುಟ್ಟಿನ ಬಗ್ಗೆ ದಂತಕಥೆಯೂ ಇದೆ. ಆ ಕಥೆಯ ಪ್ರಕಾರ, ವಿಯೆಟ್ನಾಂ ದೇಶ ರೂಪುಗೊಳ್ಳುತ್ತಿದ್ದ ಕಾಲದಲ್ಲಿ ಜನರನ್ನು ಆಕ್ರಮಣಕಾರರಿಂದ ರಕ್ಷಿಸಲು ದೇವರು ಡ್ರ್ಯಾಗನ್ ಕುಟುಂಬವನ್ನು ಭೂಮಿಗೆ ಕಳುಹಿಸಿದನಂತೆ. ಆ ಡ್ರ್ಯಾಗನ್‌ಗಳು ಉಗುಳಿದ ಮುತ್ತುಗಳೇ ಇಲ್ಲಿ ಕಲ್ಲುಗಳ ದ್ವೀಪಗಳಾಗಿದ್ದು, ಆಕ್ರಮಣಕಾರರ ಹಡಗುಗಳು ಈ ದ್ವೀಪಗಳಿಗೆ ಸಿಲುಕಿ, ಕೊನೆಗೆ ವಿಯೆಟ್ನಾಂ ಜನರು ಯುದ್ಧದಲ್ಲಿ ಗೆಲುವು ಸಾಧಿಸಿದರಂತೆ. ತಾಯಿ ಡ್ರ್ಯಾಗನ್ ನೆಲೆಯೂರಿದ ಜಾಗ 'ಹಲೋನ್ ಬೇ' ಆಗಿ, ಮಕ್ಕಳಿದ್ದ ಜಾಗ 'ಬಾಯ್ ತು ಲಾಂಗ್' ದ್ವೀಪವಾಗಿ ಪ್ರಸಿದ್ಧಿಯಾದವು ಎನ್ನಲಾಗಿದೆ.

